# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 211 | Pages. 2 | Date: 31-07-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 211 - ಪುಟಗಳು : 2 | 31-07-2026 | ಶುಕ್ರವಾರ | Ph: 8762954248 | ದರ : ₹1


# ಚೆನ್ನಮ್ಮ ಉತ್ತರ ಕ್ರಿಯಾದಿ ಕಾರ್ಯಕ್ಕೆ ಜನಸಾಗರ

## ಸ್ವಾಮೀಜಿಗಳು, ಬೆಂಬಲಿಗರ ದಂಡೇ ಆಗಮನ: ಊಟ-ಸಾಲು ವ್ಯವಸ್ಥೆ ಎಲ್ಲವೂ ಅಚ್ಚುಕಟ್ಟು: ಪೋಲೀಸ್ ಬಂದೋಬಸ್ತ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಧರ್ಮಪತ್ನಿ ದಿ.ಚೆನ್ನಮ್ಮ ಅವರ ಹನ್ನೊಂದನೇ ದಿನದ ಕಾರ್ಯ ಲಕ್ಷಾಂತರ ಜನರ ಭಾಗಿಯ ಮೂಲಕ ಅಚ್ಚುಕಟ್ಟಾಗಿ ಸಾಂಗವಾಗಿ ನೆರವೇರಿತು.

ಇದಕ್ಕಾಗಿಯೇ ಕಳೆದ 11 ದಿನಗಳಿಂದಲೂ ದೇವೇಗೌಡರ ಕುಲದೇವರು ಹೊಳೆನರಸೀಪುರ ತಾಲೂಕು ಮಾವಿನಕೆರೆ ರಂಗನಾಥಸ್ವಾಮಿ ಬೆಟ್ಟದ ತಪ್ಪಲಿನ ಸುಮಾರು 32 ಎಕರೆ ವಿಶಾಲ ಜಾಗದಲ್ಲಿ ದೊಡ್ಡಗೌಡರು ಮತ್ತವರ ಕುಟುಂಬ ಸದಸ್ಯರು, ವಿವಿಧ ಮಠಾಧೀಶರು, ರಾಜಕೀಯ ಪಕ್ಷಗಳ ನಾಯಕರು ಆಗಮಿಸಿ ಚೆನ್ನಮ್ಮ ಅವರ ಸಮಾಧಿಗೆ ನಮಿಸಿ, ವಂದಿಸಿ ಪುಣ್ಯ ಸ್ಮರಣೆ ಮಾಡಿದರು.

ನಂತರ ಸಾಮೂಹಿಕ ಪಂಕ್ತಿಯಲ್ಲಿ ಬಗೆಬಗೆಯ ರುಚಿಕರ ಊಟ ಮಾಡಿ ತೆರಳಿದರು. ತಂಡೋಪ ತಂಡವಾಗಿ ಹೆಚ್ಚು ಜನರು ಆಗಮಿಸಿದ್ದರಿಂದ ಆಗಾಗ ಟ್ರಾಫಿಕ್ ಜಾಂ ಹೊರತು ಪಡಿಸಿದರೆ ಎಲ್ಲಮೂ ಅಚ್ಚುಕಟ್ಟು, ಶಿಸ್ತು ಬದ್ಧವಾಗಿ ನಡೆಯಿತು.

ಜನರ ದಂಡು-ಬಿಗಿ ಭದ್ರತೆ: ಚೆನ್ನಮ್ಮ ಅವರ ಪುಣ್ಯತಿಥಿಯ ಬಗ್ಗೆ ಆರಂಭದಿಂದಲೂ ಹೆಚ್ಚು ಪ್ರಚಾರ ಮಾಡಿದ್ದರಿಂದ ಬೆಳಗ್ಗೆಯಿಂದಲೂ ಮಹಿಳೆಯರು, ಮಕ್ಕಳು, ಪುರುಷರು ವಿವಿಧೆಡೆಗಳಿಂದ ಆಗಮಿಸಿದ್ದರು. ಇದಕ್ಕಾಗಿ ನೂರಾರು ಖಾಸಗಿ ಬಸ್, ವಾಹನಗಳ ವ್ಯವಸ್ಥೆ ಮಾಡಲಾಗಿತ್ತು. ಹೀಗಾಗಿ ಜನರ ದಂಡೇ ನೆರೆದಿತ್ತು. ಮುನ್ನೆಚ್ಚರಿಕೆಯಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಹೀಗಾಗಿ ಯಾವುದೇ ರೀತಿಯ ಅಹಿತಕರ ಘಟನೆ ಅಥವಾ ನೂಕುನುಗ್ಗಲಿಗೆ ಎಡೆ ಆಗಲಿಲ್ಲ. ನಡುವೆ ತುಂತುರು ಮತತು ಜೋರು ಮಳೆ ಬಂದರೂ ಯಾರೊಬ್ಬರೂ ಕದಲಲಿಲ್ಲ. ಸಾಲಾಗಿ ಬಂದು ಹೋಗಲು ಹಲವು ಕಡೆಗಳಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿತ್ತು.





ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ಅವರು ಭದ್ರತೆಯ ನೇತೃತ್ವ ವಹಿಸಿದ್ದರು.

12 ಗಂಟೆ ನಂತರ ಪೂಜೆ: ಚೆನ್ನಮ್ಮ ಅವರ ಸಮಾಧಿ ಸ್ಥಳದಲ್ಲಿ ಮಧ್ಯಾಹ್ನ 12 ಗಂಟೆ ನಂತರ ಪೂಜಾ ಕಾರ್ಯ ಶುರುವಾಯಿತು. ಅದಕ್ಕೂ ಮುನ್ನ ಹರದನಹಳ್ಳಿಯ ದೇವೇಗೌಡರ ನಿವಾಸ ಹಾಗೂ ಹೊಳೆನರಸೀಪುರದ ಎಚ್.ಡಿ.ರೇವಣ್ಣ ಅವರ ಮನೆಯಲ್ಲಿ ವಿಶೇಷ ಪೂಜಾ ಕಾರ್ಯ ನೆರವೇರಿದವು.

ಈ ಸಂದರ್ಭದಲ್ಲಿ ಮೈಸೂರಿನ ಸುತ್ತೂರು ಮಠದ ಶ್ರೀ ಡಾ.ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಹಾಗೂ ದೇವೇಗೌಡರ ಕುಟುಂಬ ಸದಸ್ಯರು ಹಾಜರಿದ್ದರು.

ವಿಶೇಷ ತಿಂಡಿ ಇಟ್ಟು ಪೂಜೆ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ.ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ, ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಕೆಂಗೇರಿಯ ವಿಶ್ವ ಒಕ್ಕಲಿಗರ ಮಠದ ಶ್ರೀ ಡಾ. ನಿಶ್ಚಲಾ ನಂದನಾಥ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ 11 ದಿನದ ಉತ್ತರ ಕ್ರಿಯಾದಿ ಕಾರ್ಯಗಳು ನೆರವೇರಿದವು.

### ದುಂಡುಮಲ್ಲಿಗೆ ಪೂಜೆ

ಬಳಿಕ ಮೊದಲಿಗರಾಗಿ ಸಮಾಧಿ ಸ್ಥಳಕ್ಕೆ ಆಗಮಿಸಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು, ಪತ್ನಿ ಚೆನ್ನಮ್ಮ ಅವರ ಸಮಾಧಿಗೆ ಮೊದಲ ಪೂಜೆ ಸಲ್ಲಿಸಿದರು. ಪತ್ನಿಯ ಸಮಾಧಿಗೆ ಹೂವಿನ ಹಾರ ಹಾಕಿದರು. ಧರ್ಮಪತ್ನಿಗೆ ಅಚ್ಚುಮೆಚ್ಚಾಗಿದ್ದ ದುಂಡು ಮಲ್ಲಿಗೆ ಹೂಗಳನ್ನು ಅರ್ಪಿಸಿ ನಮಿಸಿದರು. ಬದುಕಿದ್ದಾಗಲೂ ಅನೇಕ ಸಂದರ್ಭಗಳಲ್ಲಿ ದೇವೇಗೌಡರು ಚೆನ್ನಮ್ಮ ಅವರಿಗೆ ಹೂ ಮುಡಿಸಿ ಕುಂಕುಮ ಇಟ್ಟಿದ್ದರು. ನಂತರ ಅಗಲಿದ ಪತ್ನಿ ಚೆನ್ನಮ್ಮ ಅವರ ನೆನಪಿನಲ್ಲಿ ಸಮಾಧಿ ಬಳಿಯೇ ಕೆಲ ನಿಮಿಷ ಮೌನವಾಗಿ ಕುಳಿತು ಭಾವುಕರಾದರು. ನಂತರ ಒಬ್ಬೊಬ್ಬರಾಗಿ ಕುಟುಂಬ ಸದಸ್ಯರು ಆಗಮಿಸಿದರು.

### ಊಟ, ವಾಹನ ಪಾರ್ಕಿಂಗ್, ದಾರಿ ಎಲ್ಲೂ ಇರಲಿಲ್ಲ ಗೊಂದಲ

ಆಗದಂತೆ ಒಟ್ಟು 14 ಊಟದ ಕೌಂಟರ್ ತೆರೆಯಲಾಗಿತ್ತು. ಸಾಮಾನ್ಯ ಜನರು, ಮಹಿಳೆಯರು, ವಿಐಪಿಗಳಿಗೆ ಪ್ರತ್ಯೇಕ ಕೌಂಟರ್ ತೆರೆಯಲಾಗಿತ್ತು. ಇವುಗಳ ಪಕ್ಕದಲ್ಲೇ ಸಿದ್ಧವಾದ ಅಡುಗೆ ತಯಾರಿಸಲಾಗಿತ್ತು. ಊಟ ಬಡಿಸಲು ಸ್ವಚ್ಛತೆಗೆ ಪ್ರತ್ಯೇಕ ಜನರನ್ನು ನೇಮಕ ಮಾಡಿದ್ದರಿಂದ ಸಣ್ಣ ರೀತಿಯಲ್ಲೂ ಗೊಂದಲ ಆಗಲಿಲ್ಲ. ಬಂದವರೆಲ್ಲ ನೆಮ್ಮದಿಯಿಂದ ಊಟಮಾಡಿ ಖುಷಿ ಖುಷಿಯಿಂದ ತೆರಳಿದರು.

ಚೆನ್ನಮ್ಮ ಅವರ ಪುಣ್ಯತಿಥಿ ಕಾರ್ಯಕ್ಕೆ ಎಲ್ಲ ಕಡೆಗಳಿಂದ ಜನರು ಆಗಮಿಸಿದ್ದರು. ಜನರನ್ನು ಹೊತ್ತು ತರುವ ವಾಹನಗಳಿಗೆ ಸುತ್ತಳತೆಯ ಒಂದು ಕಿ.ಮೀ.ದೂರದಲ್ಲೇ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿತ್ತು. ಈ ಸ್ಥಳದಲ್ಲಿ ಇಳಿದು ಜನರು ನಡೆದುಕೊಂಡು ಕಾರ್ಯಕ್ರಮ ಸ್ಥಳಕ್ಕೆ ಹೆಜ್ಜೆ ಹಾಕಿದರು. ಜನರನ್ನು ನಿಯಂತ್ರಿಸಲು ಎಲ್ಲ ಕಡೆಯಲ್ಲೂ ಬ್ಯಾರಿಕೇಡ್ ಅಳವಡಿಕೆ ಜೊತೆಗೆ ಪೊಲೀಸ್ ಅಧಿಕಾರಿಗಳನ್ನು ನಿಯೋಜನೆ ಮಾಡಲಾಗಿತ್ತು.

ಆದರೆ ಹರದನಹಳ್ಳಿ ಮತ್ತು ಮಾವಿನಕೆರೆ ನಡುವೆ ಹೆಚ್ಚು ವಾಹನ ಹಾಗೂ ಜನ ಸಂಚಾರ ಇದ್ದುದರಿಂದ ಕೆಲ ಹೊತ್ತು ಟ್ರಾಫಿಕ್ ಜಾಂ ಉಂಟಾಗಿತ್ತು.



ಈ ಹಿನ್ನೆಲೆಯಲ್ಲಿ ಸಮಾಧಿ ಸುತ್ತಲೂ ವಿಶೇಷ ಹೂವಿನ ಅಲಂಕಾರ ಜೊತೆಗೆ ಮಂಟಪ ನಿರ್ಮಾಣ ಮಾಡಲಾಗಿತ್ತು.

ಅಮ್ಮನ ಸಮಾಧಿ ಮುಂದೆ ವಿಶೇಷ ರೀತಿಯ ಅಡುಗೆ ಹಾಗೂ ಚೆನ್ನಮ್ಮ ಅವರಿಗೆ ಇಷ್ಟವಾದ ತಿಂಡಿ ತಿನಿಸುಗಳನ್ನು ಹೆಣ್ಣು ಮಕ್ಕಳು ಮನೆಯಿಂದಲೇ ತಯಾರಿಸಿಕೊಂಡು ಬಂದಿದ್ದವು. ಅವುಗಳನ್ನು ಸಮಾಧಿ ಮುಂದೆ ಬಾಳೆ ಎಲೆಯ ಮೇಲಿಟ್ಟು ಪೂಜೆ ಸಲ್ಲಿಸಲಾಯಿತು. ಅಪಾರ ಮಂದಿ ಈ ಕ್ಷಣಕ್ಕೆ ಸಾಕ್ಷಿಯಾದರು. ವಿವಿಧ ಸಮುದಾಯಗಳ ಜನರೂ ಆಗಮಿಸಿದ್ದು ಗಮನಾರ್ಹವಾಗಿತ್ತು.

ಪುತ್ರರಾದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಎಚ್.ಡಿ.ರೇವಣ್ಣ, ಬಾಲಕೃಷ್ಣಗೌಡ, ಡಾ.ರಮೇಶ್, ಅನಸೂಯ, ಶೈಲಜಾ, ಸೊಸೆಯಂದಿರಾದ ಭವಾನಿ ರೇವಣ್ಣ, ಅನಿತಾ ಕುಮಾರಸ್ವಾಮಿ, ಮೊಮ್ಮಕ್ಕಳಾದ ನಿಖಿಲ್ ಕುಮಾರಸ್ವಾಮಿ, ಡಾ.ಸೂರಜ್ ರೇವಣ್ಣ ಸೇರಿದಂತೆ ನೂರಾರು ಮಂದಿ ಹಾಜರಿದ್ದರು.

ಗಣ್ಯರ ಆಗಮನ: ಕೇಂದ್ರ ಸಚಿವ ವಿ.ಸೋಮಣ್ಣ, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಸಿಎ ಡಿ.ವಿ.ಸದಾನಂದಗೌಡ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಶಾಸಕರಾದ ಸಿ.ಟಿ.ರವಿ, ಡಾ.ಅಶ್ವಥ್‌ನಾರಾಯಣ, ಕೇಂದ್ರದ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ, ಜೆಡಿಎಲ್‌ಪಿ ನಾಯಕ ಸುರೇಶ್ ಬಾಬು, ಹಿರಿಯ ನಾಯಕ ಬಿ.ಎಲ್.ಶಂಕರ್, ಸಂಸದ ಮಲ್ಲೇಶಬಾಬು, ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ್, ಜೆಡಿಎಸ್ ಪಕ್ಷದ ಬಹುತೇಕ ಶಾಸಕರು, ಮಾಜಿ ಸಚಿವರು ಆಗಮಿ ಚೆನ್ನಮ್ಮನ ಸಮಾಧಿಗೆ ಕೈ ಮುಗಿದರು. ಶಿವಾರ ಉಮೇಶ್ ಮತ್ತವರ ತಂಡದಿಂದ ನಡೆದ ವಿಶೇಷ ಗಾಯನ ನಮನ ಕಾರ್ಯಕ್ರಮ ಗಮನ ಸೆಳೆಯಿತು.

# ಕಾವೇರಿ ನೀರು ಬಿಟ್ಟರೆ ಹೋರಾಟ

## ಸಿಎಂ ಕರ್ನಾಟಕ-ರೈತರ ಹಿತ ಕಾಯಬೇಕು: ಛಲವಾದಿ-ಸಿ.ಟಿ.ರವಿ ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತೀವ್ರ ವಿರೋಧದ ನಡುವೆಯೂ ತಮಿಳುನಾಡಿಗೆ ರಾತ್ರೋರಾತ್ರಿ ಕಾವೇರಿ ನೀರು ಹರಿಸಿದರೆ ದೋಸ್ತಿ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಸೇರಿ ಉಗ್ರ ಹೋರಾಟ ಮಾಡುತ್ತೇವೆ ಎಂದು ವಿಧಾನ ಪರಿಷತ್ ವಿಪಕ್ಷನಾಯಕ ಛಲವಾದಿ ನಾರಾಯಣಸ್ವಾಮಿ ಎಚ್ಚರಿಸಿದರು.

ಇಂದು ಮಾವಿನಕೆರೆಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಸಿಡಬ್ಲ್ಯೂಆರ್‌ಸಿ ಆದೇಶಕ್ಕೆ ಯಾವುದೇ ಕಾರಣಕ್ಕೂ ಮಣಿಯಬಾರದು. ರಾಜ್ಯದಲ್ಲಿರುವ ಬರಗಾಲ, ನೀರಿನ ಸ್ಥಿತಿಗತಿ ಬಗ್ಗೆ ಸಿಡಬ್ಲ್ಯೂಆರ್‌ಸಿಗೆ ಮನವರಿಕೆ ಮಾಡಿಕೊಡಬೇಕು. ಅದನ್ನು ಬಿಟ್ಟು ನೀರು ಹರಿಸಿದರೆ ನಾಡಿನ ಪಾಲಿಗೆ ಅದು ಮರಣಶಾಸನವಾಗಲಿದೆ ಎಂದು ಎಚ್ಚರಿಸಿದರು.

ಇದೇ ವೇಳೆ ಸಚಿವ ಸಂಪುಟ ವಿಸ್ತರಣೆ ಕಸರತ್ತಿನ ಬಗ್ಗೆ ಲೇವಡಿ ಮಾಡಿದ ನಾರಾಯಣಸ್ವಾಮಿ, ಕಾಂಗ್ರೆಸ್ ಸರ್ಕಾರದಲ್ಲಿ ಖಜಾನೆ ಖಾಲಿಯಾಗಿದೆ. ಹೈಕಮಾಂಡ್‌ಗೆ ಕರ್ನಾಟಕ ಒಂದು ರೀತಿಯಲ್ಲಿ ಎಂಟಿಎಂ ನಂತಾಗಿದೆ. ಯಾರು ಸೂಟ್‌ಕೇಸ್ ಕೊಡುತ್ತಾರೋ ಅವರಿಗೆ ನಿರಾಯಾಸವಾಗಿ ಮಂತ್ರಿಸ್ಥಾನ ಸಿಗುತ್ತಿದೆ. ಯಾವ ಶಾಸಕರು ಆರ್ಥಿಕವಾಗಿ ಬಲಾಢ್ಯರಾಗಿದ್ದಾರೋ ಅವರಿಗೆ ಮಾತ್ರ ಮಂತ್ರಿ ಸ್ಥಾನ ನೀಡಲಾಗುತ್ತಿದೆ ಎಂದು ಗೇಲಿ ಮಾಡಿದರು.




ಎಂಎಲ್‌ಸಿ ಸಿ.ಟಿ.ರವಿ ಮಾತನಾಡಿ, ಸಿಎಂ ಅವರು ತಮಿಳುನಾಡಿಗೆ ಹರಿಸಿದರೆ ಹೇಳಿದಂತೆ ಕೆಲಸ ಮಾಡುವ ವಾಟರ್‌ಮನ್ ರೀತಿ ಆಗಲಿದ್ದಾರೆ ಎಂದು ಛೇಡಿಸಿದರು.

ಹಿಂದೆ ನಮ್ಮ ನೀರು, ನಮ್ಮ ಹಕ್ಕು ಎಂದು ಇದೇ ಡಿ.ಕೆ.ಶಿವಕುಮಾರ್ ಅವರು ಹಲವು ದಿನಗಳ ಕಾಲ ಪಾದಯಾತ್ರೆ ಮಾಡಿದ್ದರು. ಹಾಗಾಗಿ ಅವರು ಕರ್ನಾಟಕ ಹಾಗೂ ರೈತರು, ಜನಸಾಮಾನ್ಯರ ಹಿತ ಕಾಯಬೇಕೇ ಹೊರತು, ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀಡು ಹರಿಸಬಾರದು ಎಂದು ಆಗ್ರಹಿಸಿದರು.

ಇದೇ ವೇಳೆ ಯಾರು ಏನೇ ಷಡ್ಯಂತ್ರ ಮಾಡಿದರೂ, ಅಖಂಡ ಭಾರತ ದೇಶವನ್ನು ಪಾಕಿಸ್ತಾನ ಮಾಡುವ ಹುನ್ನಾರ ನನಸಾಗದು ಎಂದ ಸಿ.ಟಿ.ರವಿ, ಕಾಂಗ್ರೆಸ್ ಹಾಗೂ ಇತರರು ಪ್ರಧಾನಿ ಅವರನ್ನೂ ಟೀಕೆ ಮಾಡಬಹುದು. ಆದರೆ ನಾವು ರಾಹುಲ್‌ಗಾಂಧಿ, ಸೋನಿಯಾಗಾಂಧಿ ಅವರನ್ನು ಟೀಕೆ ಮಾಡಿದರೆ ಎಫ್‌ಐಆರ್ ದಾಖಲಾಗುತ್ತದೆ. ನೋಟಿಸ್ ಜಾರಿ ಮಾಡಲಾಗುತ್ತದೆ ಎಂದು ವಿಷಾದಿಸಿದರು.

# ಹೆತ್ತೂರಿನಲ್ಲೂ ಪಾರ್ಕಿಂಗ್ ಸಮಸ್ಯೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೆತ್ತೂರು: ಹೋಬಳಿ ಕೇಂದ್ರದಲ್ಲಿ ದಿನೇ ದಿನೇ ವಾಹನಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಪಾರ್ಕಿಂಗ್ ಸಮಸ್ಯೆಯೂ ಗಂಭೀರ ಸ್ವರೂಪ ಪಡೆದುಕೊಂಡಿದೆ.

ವಾಹನ ನಿಲುಗಡೆಗೆ ಸಮರ್ಪಕ ಸ್ಥಳಾವಕಾಶ ಇಲ್ಲದೆ ಪ್ರಮುಖ ರಸ್ತೆಗಳಲ್ಲಿ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸುತ್ತಿರುವುದು ಸಾಮಾನ್ಯವಾಗಿದೆ.

ಇದರಿಂದ ಸಾರ್ವಜನಿಕರು ಹಾಗೂ ಪಾದಚಾರಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ರಸ್ತೆಯ ಎರಡೂ ಬದಿಗಳಲ್ಲಿ ವಾಹನ ನಿಲುಗಡೆ ಮಾಡುತ್ತಿರುವುದರಿಂದ ಸಂಚಾರ ದಟ್ಟಣೆಯಿಂದ ದಿನನಿತ್ಯ ಲಘು ಅಪಘಾತಗಳು ಉಂಟಾಗುತ್ತಿದ್ದು, ಶಾಲಾ ವಾಹನಗಳು, ಆಂಬ್ಯುಲೆನ್ಸ್ ಹಾಗೂ ಬಸ್‌ಗಳ ಸಂಚಾರಕ್ಕೂ ಅಡಚಣೆ ಎದುರಾಗುತ್ತಿದೆ.

ವೀಕೆಂಡ್ ಇತ್ಯಾದಿ ಸಂದರ್ಭಗಳಲ್ಲಿ ಪ್ರವಾಸಿಗರ ಸಾಲು ಸಾಲು ವಾಹನ ಸಂಚಾರ, ಗುರುವಾರ ಸಂತೆ ದಿನವಾದ್ದರಿಂದ ಹೆಚ್ಚು ವಾಹನಗಳ ಓಡಾಟ ಇದ್ದುದರಿಂದ ಸ್ಥಳೀಯ ಆಸ್ಪತ್ರೆಗೆ ಬರುವವರು ರಸ್ತೆಯಲ್ಲಿ ಬೈಕ್ ಹಾಗೂ ಕಾರುಗಳನ್ನು ನಿಲ್ಲಿಸಿದ್ದರಿಂದ ಪ್ರಯಾಣಿಕರಿಗೂ ಸಂಕಷ್ಟ ಪಡುವಂತಾಗಿತ್ತು.

ಗ್ರಾಮ ಪಂಚಾಯಿತಿ ಪಾರ್ಕಿಂಗ್‌ಗೆ ಪ್ರತ್ಯೇಕ ಸ್ಥಳ ಗುರುತಿಸದೇ ಇರುವುದು ಹಾಗೂ ಸಂಚಾರ ಪೊಲೀಸರ ಕೊರತೆಯಿಂದ ಸಮಸ್ಯೆ ಮತ್ತಷ್ಟು ಉಲ್ಬಣವಾಗಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.



ಈ ವೇಳೆ ಮಾತನಾಡಿದ ಬೆಳೆಗಾರ ಸಂಘದ ಕಾರ್ಯದರ್ಶಿ ಗುಂಡಿಗೇರಿ ಉದಯ್, ಸ್ಟೇಟ್‌ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ಮುಂಭಾಗ ಬೈಕ್, ಕಾರು ನಿಲಗಡೆಯಿಂದ ಎಟಿಎಂ ಮತ್ತು ಬ್ಯಾಂಕ್ ಹಣಕಾಸು ವ್ಯವಹಾರಕ್ಕೂ ತುಂಬಾ ತೊಂದರೆ ಆಗಿದೆ. ಪ್ರಮುಖ ರಸ್ತೆಗಳಲ್ಲಿ ಸಂಚಾರ ಪೊಲೀಸರನ್ನು ನಿಯೋಜಿಸಿ ಮನಬಂದಂತೆ ಪಾರ್ಕಿಂಗ್ ಮಾಡುವುದಕ್ಕೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಈ ಸಂಬಂಧ ಹಲವು ಬಾರಿ ಮನವಿ ಸಲ್ಲಿಸಿದರೂ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ ಎಂಬ ಅಸಮಾಧಾನ ವ್ಯಕ್ತವಾಗಿದೆ. ಸಾರ್ವಜನಿಕರಲ್ಲಿ ಸಂಚಾರ ನಿಯಮಗಳ ಬಗ್ಗೆ ಅರಿವು ಮೂಡಿಸಿ, ನಿಯಮ ಉಲ್ಲಂಘಿಸುವ ವಾಹನಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

# ಕಾವೇರಿ ನೀರು: ನಾಡಿಗೆ ಮತ್ತೆ ಹಿನ್ನಡೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ನವದೆಹಲಿ: ತಮಿಳುನಾಡಿಗೆ 15 ದಿನಗಳ ಕಾಲ ಪ್ರತಿನಿತ್ಯ 3,500 ಕ್ಯುಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಸಮಿತಿ ನೀಡಿದ್ದ ಆದೇಶವನ್ನ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಎತ್ತಿಹಿಡಿದಿದೆ.

ಈ ಮೂಲಕ ಕಾವೇರಿ ನದಿ ವಿವಾದ ವಿಚಾರದಲ್ಲಿ ಮತ್ತೆ ಕರ್ನಾಟಕಕ್ಕೆ ಅನ್ಯಾಯ ಜೊತೆಗೆ ದೊಡ್ಡ ಹಿನ್ನಡೆಯಾಗಿದ್ದು, ಇದೀಗ ತಮಿಳುನಾಡಿಗೆ ನೀರು ಹರಿಸುವುದು ಅನಿವಾರ್ಯ ಆಗಿದೆ.

ಇಂದು ನವದೆಹಲಿಯಲ್ಲಿ ನಡೆದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಸಿಡಬ್ಲ್ಯೂಆರ್‌ಸಿ ಆದೇಶದಂತೆ ತಮಿಳುನಾಡಿಗೆ 15 ದಿನಗಳ ಕಾಲ ಪ್ರತಿನಿತ್ಯ 3,500 ಕ್ಯುಸೆಕ್ ನೀರು ಹರಿಸುವಂತೆ ಸೂಚಿಸಿದೆ.

ಕಳೆದ ಮಂಗಳವಾರ ತಮಿಳುನಾಡಿಗೆ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಸಮಿತಿ ಕರ್ನಾಟಕಕ್ಕೆ ಆದೇಶ ಹೊರಡಿಸಿತ್ತು. ಇದನ್ನ ಪ್ರಶ್ನಿಸಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು. ಇದೀಗ ಪ್ರಾಧಿಕಾರ ಸಿಡಬ್ಲ್ಯೂಆರ್‌ಸಿ ಆದೇಶ ಎತ್ತಿ ಹಿಡಿದಿರುವುದು ಕರುನಾಡಿಗೆ ಶಾಕ್ ಆದಂತಾಗಿದೆ.

ಈ ನಡುವೆ ತಮಿಳುನಾಡಿಗೆ ಕಾವೇರಿ ನೀರು ಹರಿಸುವಂತೆ ಕಾವೇರಿ ನದಿ ನೀರು ನಿಯಂತ್ರಣ ಸಮಿತಿ ಹಾಗೂ ಪ್ರಾಧಿಕಾರ ಆದೇಶ ನೀಡಿದ್ದರೂ, ರಾಜ್ಯ ಸರ್ಕಾರ ಕಾವೇರಿ ಜಲಾನಯನ ಪ್ರದೇಶದ ರೈತರ ಹಿತರಕ್ಷಣೆಗೆ ಮುಂದಾಗಿದೆ.

ಕಾವೇರಿ ನೀರು ಹಂಚಿಕೆ ವಿಚಾರವಾಗಿ ಕಾನೂನು ಹಾಗೂ ರಾಜಕೀಯ ಹೋರಾಟದ ಮುಂದಿನ ಹೆಜ್ಜೆಗಳ ಕುರಿತು ಚರ್ಚಿಸಲು ಸಿಎಂ ಡಿ.ಕೆ ಶಿವಕುಮಾರ್ ಅವರು ಸರ್ವಪಕ್ಷಗಳ ಸಭೆ ಕರೆದಿದ್ದಾರೆ. ಆಗಸ್ಟ್ 2ರ ಭಾನುವಾರ ಮುಖ್ಯಮಂತ್ರಿ ಡಿ.ಕೆ ಶಿ ಅವರು ಮಹತ್ವದ ಸರ್ವಪಕ್ಷ ಸಭೆ ಕರೆದಿದ್ದಾರೆ.

## ಆ.04 ರಂದು ಉದ್ಯೋಗಕ್ಕಾಗಿ ನೇರ ಸಂದರ್ಶನ

ಹಾಸನ : ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಸನ ಮತ್ತು ಹಾಸನ ಜಿಲ್ಲೆಯ ಐಕ್ಯೂ ಟ್ರೀ ರಿಸರ್ಚ್ ಪ್ರೈಲಿಟಿ (ಬ್ರೈನ್ ಎಕ್ಷ್ ಯೋಗ) ಸಹಭಾಗಿತ್ವದಲ್ಲಿ ಹಾಸನ ಜಿಲ್ಲೆಯ ಯುವಕ ಯುವತಿಯರಿಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ರೈಲ್ವೇ ಸ್ಟೇಷನ್ ಹತ್ತಿರ, ಸರ್ಕಾರಿ ಐ.ಟಿ.ಐ. ಕಾಲೇಜು ಆವರಣದಲ್ಲಿ ಆ.04 ರಂದು ಬೆಳಿಗ್ಗೆ 10.30 ಕ್ಕೆ ನೇರ ಸಂದರ್ಶನ ನಡೆಯಲಿದ್ದು, ಡಿ.ಎ.ಡ್, ಬಿ.ಎ.ಡ್ ಮತ್ತು ಯಾವುದೇ ಪದವಿ ಪಾಸಾದ ಪುರುಷ/ಮಹಿಳಾ ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

ಕನ್ನಡ ಪೋಸ್ಟ್
E-mail : kannadapostnews@gmail.com facebook.com / ಕನ್ನಡ post



# ಆರೋಗ್ಯವೇ ಅಮೂಲ್ಯ ಸಂಪತ್ತು : ನಿರ್ಲಕ್ಷ್ಯ ಬೇಡ

## ಸಕಲೇಶಪುರದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ | 1,200ಕ್ಕೂ ಹೆಚ್ಚು ಮಂದಿಗೆ ಚಿಕಿತ್ಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**




ಸಕಲೇಶಪುರ: "ಆರೋಗ್ಯವೇ ಪ್ರತಿಯೊಬ್ಬರ ಜೀವನದ ಅಮೂಲ್ಯ ಸಂಪತ್ತಾಗಿದ್ದು, ಉತ್ತಮ ಆರೋಗ್ಯವಿಲ್ಲದೆ ಮಾಡುವ ಯಾವುದೇ ಸಾಧನೆಗೂ ಅರ್ಥವಿಲ್ಲ" ಎಂದು ಶಾಸಕ ಸಿಮೆಂಟ್ ಮಂಜು ಅಭಿಪ್ರಾಯಪಟ್ಟರು.

ಪಟ್ಟಣದ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ಗುರುವಾರ ಮಾನವ ಹಕ್ಕು ರಕ್ಷಣಾ ಸಮಿತಿ ಹಾಗೂ ಹಾಸನದ ಪುಣ್ಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಬೃಹತ್ 'ಉಚಿತ ಆರೋಗ್ಯ ತಪಾಸಣಾ ಶಿಬಿರ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಆರೋಗ್ಯದ ಬಗ್ಗೆ ಇರಲಿ ಜಾಗೃತಿ:

"ಇಂದಿನ ಬದಲಾದ ಜೀವನಶೈಲಿಯಲ್ಲಿ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ನಿಯಮಿತ ವ್ಯಾಯಾಮ, ಯೋಗ, ಪ್ರಾಣಾಯಾಮ ಹಾಗೂ ಸಮತೋಲಿತ ಆಹಾರ ಪದ್ಧತಿಯನ್ನು ಅಳವಡಿಸಿಕೊಂಡರೆ ಅನೇಕ ಕಾಯಿಲೆಗಳಿಂದ ದೂರವಿರಲು ಸಾಧ್ಯ. ಹೀಗಾಗಿ ಆರೋಗ್ಯದ ಬಗ್ಗೆ ಪ್ರತಿಯೊಬ್ಬರೂ ಜಾಗೃತಿ ವಹಿಸುವುದು ಅತ್ಯಗತ್ಯ" ಎಂದು ಅವರು ಕರೆ ನೀಡಿದರು.

"ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಉಚಿತ ಆರೋಗ್ಯ ಸೇವೆ ಒದಗಿಸುವ ಇಂತಹ ಶಿಬಿರಗಳು ಅತ್ಯಂತ ಉಪಯುಕ್ತವಾಗಿವೆ. ಸಮಾಜಮುಖಿ ಕಾರ್ಯಗಳಲ್ಲಿ ಮಾನವ ಹಕ್ಕು ರಕ್ಷಣಾ ಸಮಿತಿಯ ಸೇವೆ ಶ್ಲಾಘನೀಯವಾಗಿದ್ದು, ಇಂತಹ ಕಾರ್ಯಕ್ರಮಗಳು ಜನರ ಆರೋಗ್ಯ ರಕ್ಷಣೆಗೆ ಬಹುದೊಡ್ಡ ಮಟ್ಟದಲ್ಲಿ ಸಹಕಾರಿಯಾಗಲಿವೆ" ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಿತಿಯ ಕಾರ್ಯ ಶ್ಲಾಘನೀಯ:

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಮುರಳಿ ಮೋಹನ್ ಮಾತನಾಡಿ, "ಮಾನವ ಹಕ್ಕು ರಕ್ಷಣಾ ಸಮಿತಿಯ ಜಿಲ್ಲಾಧ್ಯಕ್ಷ ಜೀವನ್ ಗೌಡ ಅವರ ನೇತೃತ್ವದಲ್ಲಿ ಸಮಿತಿಯು ಜಿಲ್ಲೆಯಾದ್ಯಂತ ಮಾನವ ಹಕ್ಕುಗಳ ಸಂರಕ್ಷಣೆ ಹಾಗೂ ವಿವಿಧ ಸಮಾಜಮುಖಿ ಚಟುವಟಿಕೆಗಳನ್ನು ನಡೆಸುತ್ತಿದೆ. 'ಆರೋಗ್ಯವೇ ಸಂಪತ್ತು' ಎಂಬ ಧ್ಯೇಯದೊಂದಿಗೆ ಇಂತಹ ಬೃಹತ್ ಶಿಬಿರ ಆಯೋಜಿಸಿರುವುದು ಅಭಿನಂದನೀಯ" ಎಂದರು.

ಸಮಿತಿಯ ಪ್ರಮುಖರಾದ ಕಿರಣ್ ಮಾತನಾಡಿ, "ಕಳೆದ ಹಲವು ವರ್ಷಗಳಿಂದ ಸಮಿತಿಯು ಸಮಾಜಮುಖಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿದ್ದು, ಅದರ ಭಾಗವಾಗಿ ಈ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿದೆ. ಬೆಳಗ್ಗೆ 9ರಿಂದ ಸಂಜೆ 4ರವರೆಗೆ ನಡೆದ ಶಿಬಿರದಲ್ಲಿ ತಜ್ಞ ವೈದ್ಯರು ತಪಾಸಣೆ ನಡೆಸಿ ಉಚಿತವಾಗಿ ಔಷಧಿ ವಿತರಿಸಿದ್ದಾರೆ. ಹೆಚ್ಚಿನ ಚಿಕಿತ್ಸೆಯ ಅಗತ್ಯವಿರುವವರಿಗೆ ಹಾಸನದ ಪುಣ್ಯ ಆಸ್ಪತ್ರೆಯಲ್ಲಿ ಶೇ. 60ರಷ್ಟು ರಿಯಾಯಿತಿ ದರದಲ್ಲಿ ಚಿಕಿತ್ಸೆ ಪಡೆಯುವ ಅವಕಾಶವನ್ನೂ ಕಲ್ಪಿಸಲಾಗಿದೆ" ಎಂದು ಮಾಹಿತಿ ನೀಡಿದರು.

1,200ಕ್ಕೂ ಹೆಚ್ಚು ಮಂದಿಗೆ ತಪಾಸಣೆ:

ಈ ಬೃಹತ್ ಶಿಬಿರದಲ್ಲಿ ಸುಮಾರು 1,200ಕ್ಕೂ ಹೆಚ್ಚು ಸಾರ್ವಜನಿಕರು ಪಾಲ್ಗೊಂಡು ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಶಿಬಿರಾರ್ಥಿಗಳಿಗೆ ಉಚಿತ ಉಪಾಹಾರ, ಮಧ್ಯಾಹ್ನದ ಊಟ ಹಾಗೂ ತುರ್ತು ಸೇವೆಗಾಗಿ ಆಂಬುಲೆನ್ಸ್ ಸೌಲಭ್ಯವನ್ನು ಆಯೋಜಕರು ಕಲ್ಪಿಸಿದ್ದರು.

ಕಾರ್ಯಕ್ರಮದಲ್ಲಿ ಮಾನವ ಹಕ್ಕು ರಕ್ಷಣಾ ಸಮಿತಿಯ ರಾಜ್ಯಾಧ್ಯಕ್ಷ ಲಕ್ಷ್ಮೀನಾರಾಯಣ್, ತಾಲೂಕು ಅಧ್ಯಕ್ಷ ವಿಜಿಕುಮಾರ್, ಕಾರ್ಯದರ್ಶಿ ಕಿಟ್ಟಿ, ವಕೀಲ ಪ್ರದೀಪ್, ಹಿಂದೂಪರ ಸಂಘಟನೆಗಳ ಮುಖಂಡ ರಘು, ಕೌಶಿಕ್, ವ್ಯವಸ್ಥಾಪಕ ರಘು, ಮಹೇಶ್ ಸೇರಿದಂತೆ ಹಲವು ಗಣ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ವಿಶ್ವಕರ್ಮ ಜಗದ್ಗುರು ಪೀಠದಲ್ಲಿ ಚಾತುರ್ಮಾಸ್ಯ ವ್ರತಾನುಷ್ಠಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**



ಹಾಸನ: ಅರಕಲಗೂಡು ತಾಲ್ಲೂಕು ಅರೇಮಾದನಹಳ್ಳಿಯ ಶ್ರೀ ವಿಶ್ವಕರ್ಮ ಜಗದ್ಗುರು ಪೀಠದ ಯತಿಶ್ರೇಷ್ಠರಾದ ಪರಮಪೂಜ್ಯ ಅನಂತಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥ ಮಹಾಸ್ವಾಮಿಗಳವರ 45ನೇ ಹಾಗೂ ಕಿರಿಯ ಶ್ರೀಗಳಾದ ಯತಿವರ್ಯ ಪರಮಪೂಜ್ಯ ಶ್ರೀ ಶ್ರೀ ಜ್ಞಾನಘನ ವಿದ್ಯಾತೀರ್ಥ ಮಹಾಸ್ವಾಮಿಗಳವರ ಪ್ರಥಮ ಚಾತುರ್ಮಾಸ್ಯ ವ್ರತಾನುಷ್ಠಾನ ಕಾರ್ಯಕ್ರಮವು ಬುಧವಾರ ಶ್ರೀಮಠದಲ್ಲಿ ಆರಂಭಗೊಂಡಿತು.

ಚಾತುರ್ಮಾಸ್ಯದ ಅಂಗವಾಗಿ ಧ್ವಜಾರೋಹಣ, ಕೃಷ್ಣ ಪಂಚಕ, ವ್ಯಾಸ ಪಂಚಕ, ಶಂಕರ ಪಂಚಕ ಗುರುಪರಂಪರೆಯ ಗುರುಗಳ ಪೂಜಾ ಕಾರ್ಯಕ್ರಮ ನೆರವೇರಿತು.

ಈ ಸಂದರ್ಭದಲ್ಲಿ ಶಿವಸುಜ್ಞಾನತೀರ್ಥ ಮಹಾಸ್ವಾಮಿಗಳವರು ಆಶೀರ್ವಚನ ನೀಡಿ, ಇಹದಲ್ಲಿ ಸನ್ಮಾರ್ಗ ಜೀವನ ನಡೆಸಿ ಪರದಲ್ಲಿ ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡಾಗ ಮನುಷ್ಯ ಜನ್ಮ ಸಾರ್ಥಕ್ಯವಾಗುತ್ತದೆ. ಸೃಷ್ಟಿ, ಸ್ಥಿತಿ, ಲಯಕಾರಕನಾದ ವಿಶ್ವಕರ್ಮ ವಿಷ್ಣುವಿನ ಅಂಶ ಎಂದು ವೇದಗಳು ಸಾರಿವೆ. ಸಮಾಜ ಭಾಂದವರು ನಿಷ್ಠೆಯಿಂದ ಸನಾತನ ಧರ್ಮದ ಧಾರ್ಮಿಕ ಮತ್ತು ಗುರುಪರಂಪರೆಯ ಆಚರಣೆಗಳನ್ನು ಕರ್ತವ್ಯ ಎಂದು ಭಾವಿಸಿ ಪಾಲಿಸುತ್ತಾ ಅದನ್ನು ಉಳಿಸಿ ಬೆಳೆಸಬೇಕೆಂದರು. ಕಿರಿಯ ಶ್ರೀಗಳಾದ ಪರಮಪೂಜ್ಯ ಜ್ಞಾನಘನ ವಿದ್ಯಾತೀರ್ಥ ಮಹಾಸ್ವಾಮಿಗಳು ಮಾತನಾಡಿ, ಸದ್ಗುರುವಿನ ಕರುಣೆಯಿಂದ ಸಾಂಸಾರಿಕ ಜೀವನದಲ್ಲಿ ಸದ್ಗತಿ ದೊರೆಯುತ್ತದೆ ಎಂದು ಶಾಸ್ತ್ರಗಳು ಹೇಳುತ್ತವೆ. ಆದ್ದರಿಂದ ಚಾತುರ್ಮಾಸ್ಯದಲ್ಲಿ ಗುರುಪರಂಪರೆಯನ್ನು ವಿಶೇಷವಾಗಿ ಆರಾಧಿಸಬೇಕೆಂದು ಕರೆ ನೀಡಿ ಚಾತುರ್ಮಾಸ್ಯದ ಹಿನ್ನೆಲೆ ಮತ್ತು ಮಹತ್ವವನ್ನು ವಿವರಿಸಿದರು.

ವೇದಿಕೆಯಲ್ಲಿ ಕರ್ನಾಟಕ ರಾಜ್ಯ ವಿಶ್ವಕರ್ಮ ಮಹಾಮಂಡಲದ ಅಧ್ಯಕ್ಷ ಎಲ್. ನಾಗರಾಜಾಚಾರ್, ಹಾಸನ ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಹೆಚ್. ವಿ. ಹರೀಶ್, ಮಲೆಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಆಲನಹಳ್ಳಿ ರಘು, ಶ್ರೀ ಮಠದ ಪಾರುಪತ್ತೆಗಾರ ಎ. ಆರ್. ಶೇಷಕುಮಾರ್, ರಾಜೇಶ್ ಮಠದಬೆಟ್ಟು, ಸುಧಾಕರಾಚಾರ್ಯ, ಹೆಚ್. ಬಿ. ಕೃಷ್ಣ, ಹೆಚ್. ಶೀನಿವಾಸ್, ಬಿ. ಲೋಕೇಶ್, ಅರಕಲಗೂಡು ತಾಲ್ಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಸಂತೋಷ್, ಯಮಸಂಧಿ ಸ್ವಾಮಿ, ರಾಮನಾಥಪುರ ಲೋಕೇಶ್, ಪುರೋಹಿತರುಗಳಾದ ದಯಾನಂದಶರ್ಮ, ಜಿ. ಟಿ. ರತ್ನಾಕರ್ ಹಾಜರಿದ್ದರು.

# ಅಧಿಕಾರಿಗಳ ನಿರ್ಲಕ್ಷ್ಯ: ಅಪೂರ್ಣ ಬಸ್ ಶೆಲ್ಟರ್‌ಗೆ ಟಾರ್ಪಾಲ್ ಅಳವಡಿಸಿದ ಸಂಘಟನೆಗಳು

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**



ಸಕಲೇಶಪುರ: ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದ ಕಾಮಗಾರಿ ಅಪೂರ್ಣಗೊಂಡು ಪ್ರಯಾಣಿಕರಿಗೆ ತೀವ್ರ ತೊಂದರೆಯಾಗುತ್ತಿದ್ದ ಇಲ್ಲಿನ ಹಳೆ ಬಸ್ ನಿಲ್ದಾಣದ ಸಮೀಪದ ಬಸ್ ಶೆಲ್ಟರ್‌ಗೆ, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಸ್ವಯಂಪ್ರೇರಿತವಾಗಿ ಟಾರ್ಪಾಲ್ ಅಳವಡಿಸುವ ಮೂಲಕ ಪ್ರಯಾಣಿಕರಿಗೆ ತಾತ್ಕಾಲಿಕ ರಕ್ಷಣೆ ಕಲ್ಪಿಸಿದ್ದಾರೆ.

ಪಟ್ಟಣದ ಉಪ ನೋಂದಣಾಧಿಕಾರಿ ಕಚೇರಿಗೆ ಸೇರಿದ ಜಾಗದಲ್ಲಿ ನಿರ್ಮಾಣವಾಗುತ್ತಿದ್ದ ಹೈಟೆಕ್ ಬಸ್ ಶೆಲ್ಟರ್ ಕಾಮಗಾರಿ ತಾಂತ್ರಿಕ ಕಾರಣಗಳಿಂದಾಗಿ ಅರ್ಧಕ್ಕೆ ಸ್ಥಗಿತಗೊಂಡಿದೆ. ಶೇ. 75ರಷ್ಟು ಕಾಮಗಾರಿ ಪೂರ್ಣಗೊಂಡಿದ್ದರೂ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸದ ಕಾರಣ ಶಾಲಾ ಮಕ್ಕಳು, ಮಹಿಳೆಯರು, ವೃದ್ಧರು ಸೇರಿದಂತೆ ನೂರಾರು ಪ್ರಯಾಣಿಕರು ಮಳೆ, ಗಾಳಿ ಹಾಗೂ ಬಿಸಿಲಿನ ನಡುವೆಯೇ ಬಸ್‌ಗಾಗಿ ಕಾಯುವ ಅನಿವಾರ್ಯತೆ ನಿರ್ಮಾಣವಾಗಿತ್ತು.

ಈ ಕುರಿತು ಹಲವು ಬಾರಿ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತದ ಗಮನಕ್ಕೆ ತರಲಾಗಿದ್ದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಇದರಿಂದ ಬೇಸತ್ತ ವಿವಿಧ ಸಂಘಟನೆಗಳ ಮುಖಂಡರು, ಪ್ರಯಾಣಿಕರ ಹಿತದೃಷ್ಟಿಯಿಂದ ತಾವೇ ಮುಂದಾಗಿ ಶೆಲ್ಟರ್‌ಗೆ ಟಾರ್ಪಾಲ್ ಅಳವಡಿಸುವ ಮೂಲಕ ತಾತ್ಕಾಲಿಕ ವ್ಯವಸ್ಥೆ ಕಲ್ಪಿಸಿದ್ದಾರೆ.

"ಸಕಲೇಶಪುರದಲ್ಲಿ ಸಾರ್ವಜನಿಕ ಸಮಸ್ಯೆಗಳು ಹೋರಾಟಗಳ ಮೂಲಕವೇ ಪರಿಹಾರ ಕಾಣುವಂತಹ ದುಸ್ಥಿತಿ ಇದೆ. ಬಸ್ ನಿಲ್ದಾಣ, ಸಾರ್ವಜನಿಕ ಶೌಚಾಲಯ, ಕಾಡಾನೆ ಹಾವಳಿ, ಕಸದ ನಿರ್ವಹಣೆ ಹಾಗೂ ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ಹಲವು ವಿಚಾರಗಳಲ್ಲಿ ಸಾರ್ವಜನಿಕರೇ ಬೀದಿಗಿಳಿಯಬೇಕಾಗಿದೆ. ಜನಪರ ಕೆಲಸಗಳಿಗೆ ಆಡಳಿತ ಯಂತ್ರ ಸ್ಪಂದಿಸದಿದ್ದರೆ ಸಾರ್ವಜನಿಕರೇ ಇಂತಹ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ" ಎಂದು ಸಂಘಟನೆಗಳ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ, ಅಪೂರ್ಣಗೊಂಡಿರುವ ಬಸ್ ಶೆಲ್ಟರ್ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸುವಂತೆ ಜಿಲ್ಲಾಡಳಿತವನ್ನು ಆಗ್ರಹಿಸಿದರು.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕಾಂತರಾಜ್ ಹೊನ್ನೆಕೋಡಿ ಹಾಗೂ ರೈಲ್ವೆ ಹೋರಾಟ ರಕ್ಷಣಾ ಸಮಿತಿಯ ನಾರಾಯಣ ಆಳ್ವ ಅವರು ಟಾರ್ಪಾಲ್ ವ್ಯವಸ್ಥೆ ಕಲ್ಪಿಸಿದರೆ, ಶ್ರೀರಾಮಸೇನೆ ಮುಖಂಡ ಉಮೇಶ್ ಅವರು ಪ್ರಯಾಣಿಕರಿಗೆ ಕುಳಿತುಕೊಳ್ಳಲು ಕುರ್ಚಿಗಳನ್ನು ಒದಗಿಸಿದರು.

ಈ ಸಂದರ್ಭದಲ್ಲಿ ಪತ್ರಕರ್ತ ಮಲ್ನಾಡ್ ಮೆಹಬೂಬ್, ಬಿಜೆಪಿ ಮುಖಂಡ ಕಿತ್ತೂರು ದೇವರಾಜ್, ಬಾಗೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ನೀಲಕಂಠ, ಅಡುಗೆ ಗುತ್ತಿಗೆದಾರ ಅಫ್ಸರ್ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಆಂಬ್ಯುಲೆನ್ಸ್ ಪಲ್ಟಿ ಚಾಲಕನಿಗೆ ಗಾಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಅರಸೀಕೆರೆ: ಬೆಂಗಳೂರಿನಿಂದ ರೋಗಿಯೊಬ್ಬರನ್ನು ಕರೆದೊಯ್ದು ಶಿವಮೊಗ್ಗ ಜಿಲ್ಲೆ ಭದ್ರಾವತಿಗೆ ಬಿಟ್ಟು ವಾಪಸ್ ಬರುತ್ತಿದ್ದ ಖಾಸಗಿ ಆಂಬ್ಯುಲೆನ್ಸ್ ಗುರುವಾರ ಮಧ್ಯಾಹ್ನ ಪಲ್ಟಿಯಾಗಿದೆ.

12.15 ರ ಸುಮಾರಿಗೆ ತಾಲ್ಲೂಕಿನ ಗೀಜಿಹಳ್ಳಿ ಗ್ರಾಮದ ಬಳಿಯ ಪೆಟ್ರೋಲ್ ಬಂಕ್ ಹಿಂಭಾಗದ ಬೈಪಾಸ್ ರಸ್ತೆಯಲ್ಲಿ ಚಲಿಸುತ್ತಿರುವಾಗಲೇ ಟೈಯರ್ ಸಿಡಿದು ಈ ಘಟನೆ ಸಂಭವಿಸಿದೆ.

ಅಪಘಾತದಲ್ಲಿ ಆಂಬ್ಯುಲೆನ್ಸ್ ಚಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅಪಾಯದಿಂದ ಬಚಾವಾಗಿದ್ದಾರೆ. ಕೂಡಲೇ ಸ್ಥಳೀಯರು ತಕ್ಷಣವೇ ಅವರನ್ನು ಸ್ಥಳೀಯ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದಾರೆ. ಘಟನೆಯಿಂದ ಕೆಲಕಾಲ ಬೈಪಾಸ್ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಸುದ್ದಿ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಸ್ಥಿತಿ ತಿಳಿಗೊಳಿಸಿದರು.

# ಇತಿಹಾಸದಲ್ಲಿ ಈ ದಿನ

## ಜುಲೈ-31

1620 ಯಾತ್ರಿಕ ಪಿತಾಮಹರು ಅಮೇರಿಕಕ್ಕೆ ಹೋಗುವ ದಾರಿಯಲ್ಲಿ ನೆದರ್‌ಲ್ಯಾಂಡ್ಸ್‌ನ ಲೈಡೆನ್‌ನಿಂದ ಇಂಗ್ಲೆಂಡ್‌ಗೆ ಹೊರಟರು.

1917 - ಮೊದಲನೆಯ ಮಹಾಯುದ್ಧ: ಪಾಸ್ಚೆಂಡೇಲ್ ಕದನ (ಮೂರನೇ ಯಪ್ರೆಸ್ ಕದನ) ಪ್ರಾರಂಭವಾಯಿತು ಮತ್ತು ನವೆಂಬರ್ 6, 1917 ರವರೆಗೆ ನಡೆಯಿತು, ಇದು ಸರಿಸುಮಾರು 500,000 ಸಾವುನೋವುಗಳಿಗೆ ಕಾರಣವಾಯಿತು.

1961 ಇಸ್ರೇಲ್ ತನ್ನ ಒಂದು ಮಿಲಿಯನ್ ವಲಸಿಗರನ್ನು ಸ್ವಾಗತಿಸಿತು.

ರಾಯಲ್ ನೇವಿ ನಾವಿಕರು ತಮ್ಮ ದೈನಂದಿನ ರಮ್ ಪಡಿತರಕ್ಕಾಗಿ ಸಾಲುಗಟ್ಟಿ ನಿಂತಿದ್ದಾರೆ. ಬ್ಲ್ಯಾಕ್ ಟಾಟ್ ಡೇ

1970 ರ ಬ್ಲ್ಯಾಕ್ ಟಾಟ್ ದಿನ : 1740 ರಲ್ಲಿ ಪ್ರಾರಂಭವಾದ ರಾಯಲ್ ನೇವಿಯಲ್ಲಿ ಅಧಿಕೃತವಾಗಿ ಮಂಜೂರಾದ ರಮ್ ಪಡಿತರ ಕೊನೆಯ ದಿನ.

2007: ಉತ್ತರ ಐರ್ಲೆಂಡ್‌ನಲ್ಲಿ ಬ್ರಿಟಿಷ್ ಸೈನ್ಯದ ಉಪಸ್ಥಿತಿಯಾದ ಆಪರೇಷನ್ ಬ್ಯಾನರ್, ಇದುವರೆಗಿನ ಅತ್ಯಂತ ದೀರ್ಘಾವಧಿಯ ಬ್ರಿಟಿಷ್ ಸೈನ್ಯದ ಕಾರ್ಯಾಚರಣೆಯಾಗಿ ಕೊನೆಗೊಂಡಿತು.

1912 ರಲ್ಲಿ ಅಮೇರಿಕಾ ಸರ್ಕಾರ ಬಾಕ್ಸಿಂಗ್ ಬಹುಮಾನ ಹೋರಾಟಗಳ ಚಲನಚಿತ್ರಗಳು ಮತ್ತು ಫೋಟೋಗಳನ್ನು ಸೆನ್ಸಾರ್ ಮಾಡಿತು; ಇದು 1940 ರವರೆಗೆ ಜಾರಿಯಲ್ಲಿತ್ತು.

1959 ರಲ್ಲಿ ಕ್ಲಿಫ್ ರಿಚರ್ಡ್ ಮತ್ತು ದಿ ಶಾಡೋಸ್ "ಲಿವಿಂಗ್ ಡಾಲ್" ನೊಂದಿಗೆ ತಮ್ಮ ಮೊದಲ ಬ್ರಿಟಿಷ್ # 1 ಸಿಂಗಲ್ ಅನ್ನು ಬಿಡುಗಡೆ ಮಾಡಿದರು; ಇದು 1959 ರ ಅತ್ಯುತ್ತಮ ಮಾರಾಟವಾದ ಬ್ರಿಟಿಷ್ ಸಿಂಗಲ್ ಆಯಿತು.

1928: ಪೋಲೆಂಡ್‌ನ ಹಲಿನಾ ಕೊನೊಪಕಾ ಆಮ್ಸ್ಟರ್‌ಡ್ಯಾಮ್ ಕ್ರೀಡಾಕೂಟದಲ್ಲಿ ಮಹಿಳಾ ಒಲಿಂಪಿಕ್ ಅಥ್ಲೆಟಿಕ್ಸ್‌ನಲ್ಲಿ 39.62 ಮೀ ಡಿಸ್ಕಸ್ ಎಸೆದು ಮೊದಲ ಚಿನ್ನದ ಪದಕವನ್ನು ಗೆದ್ದರು.

# ಲಲಿತಾ-3

**ಗ್ರಾಮಾಯಣ-35**

**ಧನಂಜಯ ಜೀವಾಳ ಬಿ.ಕೆ.**



ಎಲ್ಲೋ ವರ್ಷಕ್ಕೊಮ್ಮೆಯೋ ಎರಡು ಬಾರಿಯೊ ಹಾಗೆಯೇ ತಮ್ಮ ಇನ್ನೋರ್ವ ಗೆಳೆಯ ಪುಟ್ಟಲಿಂಗಯ್ಯನವರ ಮನೆಗೂ ಹೋಗಿಬರುವ ವಾಡಿಕೆ ಇದ್ದುದರಿಂದ ಅಂದು ಅದು ಇದೂ ಲೋಕಾಭಿರಾಮವಾಗಿ ಮಾತನಾಡಿಕೊಂಡು ತಡವಾಗಿ ಮನೆ ಕಡೆಗೆ ಹೊರಟಿದ್ದ ಕೇಪಿ ತಮ್ಮ ಇಪ್ಪತ್ತೈದು ವರ್ಷಗಳ ಹಿಂದಿನ ವಿದ್ಯಾರ್ಥಿನಿ ಲಲಿತಳನ್ನ ಆಕೆಯ ಗಂಡನನ್ನು ಮನೆ ತಲುಪಿಸುವ ಪ್ರಹಸನದಲ್ಲಿ ಅನಿರೀಕ್ಷಿತವಾಗಿ ಭಾಗಿಯಾಗಿ ಅತ್ಯಂತ ಆಕಸ್ಮಿಕವೆಂಬಂತೆ ಭೇಟಿಯಾಗಿದ್ದರು. ತಮ್ಮ ಪಕ್ಕವೇ ಕಾಫಿ ಕುಡಿಯಲು ಬಂದು ಕುಳಿತ ಹೆಂಡತಿಗೆ ಇದನ್ನೆಲ್ಲಾ ಹೇಳಿ ಕುಡಿದು ಖಾಲಿಯಾದ ಕಾಫಿ ಲೋಟವನ್ನು ಹಾಗೂ ಅವತ್ತಿನ ಪೇಪರ್‌ನ್ನು ವರ್ಗಾಯಿಸಿದರು.

ಎದುರಿಗಿದ್ದ ಟೀಪಾಯಿ ಮೇಲೆ ಕಾಲು ಚಾಚಿ ಎದುರಿನ ಆಕಾಶದಲ್ಲಿ ಇಂಗ್ಲೀಷಿನ ವೀ ಆಕಾರದಲ್ಲಿ ಎತ್ತಲೋ ಹಾರಿಹೋಗುತ್ತಿದ್ದ ಎಂಟ್ಹತ್ತು ಬೆಳ್ಳಕ್ಕಿಗಳ ತಂಡವನ್ನೇ ತದೇಕಚಿತ್ತರಾಗಿ ದಿಟ್ಟಿಸುತ್ತಾ ತಮ್ಮದೇ ಆದ ಆಲೋಚನಾ ಲಹರಿಗೆ ಬಿದ್ದರು. ಸೀಬೇ ಮರದ ಮೇಲಿನ ಅಳಿಲು, ತೆಳುಕಡ್ಡಿಯ ಮೇಲೆ ತೇಲುತೇಲುತ್ತಲೇ ಕುಳಿತಿರುವ ಬುಲ್‌ಬುಲ್, ಹಸುವಿನೆಡೆಗೊಮ್ಮೆ ಬಯಲಿನತ್ತ ಒಮ್ಮೆ ಜಿಂಗ್ ಜಿಂಗ್ ಎಂದು ಜಿಗಿಯುತ್ತಿರುವ ಎಳೆಗರು, ನಿಧಾನವಾಗಿ ಇಬ್ಬನಿಯ ಹನಿಯನ್ನು ತುಳುಕಿಸಲು ಸಿದ್ದವಾದ ಎಲೆ, ಆಹಾರ ಸಂಗ್ರಹಿಸಲು ಹೊರಟಿರುವ ಇರುವೆಗಳು, ಹೂವಿನ ಸುತ್ತ ಮಧು ಸಂಗ್ರಹಿಸಲು ಸುತ್ತುತ್ತಿರುವ ಜೇನು, ಚಿಟ್ಟೆ ಮುಂತಾದವುಗಳನ್ನು ಗಮನಿಸಿದಾಗ ನಮಗೆ ಆಗುವ ಆನಂದ ಹಾಗೂ ನಮ್ಮ ಜೀವನ ಮಾರ್ಗ, ಅವುಗಳ ಬದುಕನ್ನು ಯಾವುದೋ ಘಟ್ಟದಲ್ಲಿ ತೌಲನಿಕವಾಗಿ ಅವಲೋಕಿಸಿದಾಗ ನಾವೇನೇನನ್ನೋ ಕಳೆದುಕೊಂಡಿದ್ದೇವೆ ಹಾಗೂ ನಮ್ಮ ಜೀವನವನ್ನು ಸಂಕೀರ್ಣಗೊಳಿಸಿಕೊಂಡಿದ್ದೇವೆ ಎಂದು ತಿಳಿಯುತ್ತದೆ. ಇದರಿಂದಾಚೆಗಿನ ಬದುಕಿಗೆ ಹಾತೊರೆಯುವ ಮನುಷ್ಯ ಯಾವ ಪುರುಷಾರ್ಥಕ್ಕೆ ದಿನದಿನವೂ ಪ್ರತಿಕ್ಷಣವೂ ಬಡಿದಾಡುತ್ತಾನೆ ಎಂದು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳಲಾರಂಭಿಸಿದರು.

ತಮ್ಮ ಮೂವತ್ತೇಳು ವರ್ಷಗಳ ಸುಧೀರ್ಘ ಶಿಕ್ಷಕ ವೃತ್ತಿಯಲ್ಲಿ ಕನಿಷ್ಠವೆಂದರೂ ಇಪ್ಪತ್ತೈದು ಸಾವಿರ ವಿದ್ಯಾರ್ಥಿಗಳ ಬದುಕನ್ನು ರೂಪಿಸಲು ಸಿಕ್ಕಿದ್ದ ಅವಕಾಶವನ್ನು ಅತ್ಯಂತ ಜತನದಿಂದ ಬಳಸಿಕೊಂಡಿದ್ದ ಕೇಪೀಯವರು ಬಹುತೇಕ ವಿದ್ಯಾರ್ಥಿಗಳ ಮೆಚ್ಚಿನ ಮೇಷ್ಟ್ರಾಗಿದ್ದರು.

ಮಧ್ಯಾಹ್ನದ ವರೆವಿಗೂ ತಮ್ಮ ಮನೆಯ ಸುತ್ತಲಿನ ವಿಶಾಲವಾದ ಕಾಂಪೌಂಡಿನ ಒಳಗಿದ್ದ ಕೈತೋಟದ ಪ್ರತೀ ಗಿಡಗಳನ್ನು ತಮ್ಮ ವಿದ್ಯಾರ್ಥಿಗಳನ್ನು ಮಾತನಾಡಿಸುವಂತೆ ತಲೆ ಸವರಿ ಖುಷಿಪಡುತಿದ್ದರು. ಮಧ್ಯಾಹ್ನ ಊಟ ಮುಗಿಸಿದವರಿಗೆ ಇದ್ದಕ್ಕಿದ್ದಂತೆ ಲಲಿತನ ಮನೆಗೆ ಬರುತ್ತೇನೆಂದು ಹೇಳಿದ್ದು ನೆನಪಿಗೆ ಬಂದಿತು. ಮುತ್ತಣ್ಣನ ಆರೋಗ್ಯ ಹೇಗಿರಬಹುದೆಂಬ ಆತಂಕದಿಂದ ಹಾಗೂ ತನ್ನ ಪ್ರಿಯ ಶಿಷ್ಯೆ ಲಲಿತಾಳ ವಿಧಿಗೆ ಮರುಗುತ್ತಾ ಚಪ್ಪಲಿಗಳನ್ನು ಕಾಲಿಗೆ ತೊಡಿಸಿಕೊಳ್ಳುತ್ತಾ ಹೀಗೇ ಹೊರಗೆ ಹೋಗಿ ಬರುತ್ತೇನೆಂದು ಹೆಂಡತಿಗೆ ಕೂಗಿ ಹೇಳಿ, ಮನೆ ಮುಂದಿನ ರಸ್ತೆಯಲ್ಲಿ ಎರಡೂ ಪಕ್ಕ ಬೆಳೆದಿದ್ದ ಸಂಪಿಗೆ ಮರಗಳ ನೆರಳಲ್ಲಿ ನಡೆಯುತ್ತಾ ರಸ್ತೆಯ ಆಚೆ ಕೊನೆಯಲ್ಲಿದ್ದ ಆಟೋ ನಿಲ್ದಾಣ ತಲುಪಿದರು.

ಲಲಿತನ ಮನೆ ತಲುಪಿದಾಗ, ಲಲಿತ ಗಂಡನ ಮುಂದೆ ರವೆ ಗಂಜಿಯ ತಟ್ಟೆಯನ್ನು ಹಿಡಿದುಕೊಂಡು ಚಮಚದಿಂದ ಕುಡಿಸಲು ಯತ್ನಿಸುತಿದ್ದಳು. ತನಗೆ ಇನ್ನೂ ಪೂಸಿಮಾಡಲೆಂದು ಚಿಕ್ಕಮಕ್ಕಳು ಹಠ ಮಾಡುವಂತೆ ಒಲ್ಲೆ ಒಲ್ಲೆ ಎನ್ನುತಿದ್ದ ಆತ. ಬಹಳ ಹೊತ್ತಿನಿಂದ ಗಂಜಿ ಕುಡಿಸಲು ಹರಸಾಹಸ ಪಡುತಿದ್ದ ಲಲಿತ, ''ಇನ್ನು ನನ್ನ ಕೈಲಿ ಏನೂ ಮಾಡಕ್ಕಾಗಲ್ಲ, ಬದುಕ್ಬೇಕಂದ್ರೆ ಕುಡೀರಿ, ಇಲ್ದಿದ್ರೆ ನಿಮ್ಮ ಹಣೇಬರಹ'' ಎಂದು ಚೇರ್ ಮೇಲೆ ಆ ಗಂಜಿಯ ತಟ್ಟೆಯನ್ನು ಇಟ್ಟು, ಮುಂಬಾಗಿಲ ಬೋಲ್ಟ್ ಹಾಕಲು ಮುಂದಾದವಳು ಮನೆ ಮುಂದಿನ ಗೇಟು ದಾಟುತಿದ್ದ ಕೇಪೀ ಮೇಷ್ಟ್ರನ್ನು ಕಂಡು ಆ ಗಂಜಿಯ ತಟ್ಟೆಯನ್ನು ತೆಗೆದು ಒಳಗಿಟ್ಟು, ಟವೆಲೊಂದನ್ನು ತಂದು ಚೇರನ್ನು ಒರೆಸಿ ಮೇಷ್ಟ್ರು ಕೂರಲು ಅನುವಾಗಿಸಿದಳು.

ಕೇಪೀಯವರನ್ನು ನೋಡಿ ಉಮ್ಮಳಿಸಿ ಬಂದ ದುಃಖವನ್ನು ಭರಿಸಲಾಗದೇ ದೊಡ್ಡದನಿಯಲ್ಲಿ ಅಳುವ ಸ್ವರ ಹೊಮ್ಮಿಸಿ, ಮನೆಗೆ ಬಂದವರೆದುರು ಇದು ಸರಿಯಲ್ಲವೆಂದೆಣಿಸಿ ಸಣ್ಣದನಿಯಲ್ಲಿ ಕುಸುಗಲಾರಂಭಿಸಿದಳು. ಅವಳತ್ತ ತಿರುಗಿದ ಮುತ್ತಣ್ಣ, 'ಏಯ್ ಲಲಿತಾ ಯಾರೋ ಬಂದವ್ರೆ, ನೋಡೇ, ಏನು ಬೇಕಂತೆ ಕೇಳು' ಎಂದ. ''ಯಾರೋ ಅಲ್ಲ ನಮ್ಮ ಕೇಪೀ ಮೇಷ್ಟ್ರೇಯ, ನಿನ್ನೆ ನಿಮ್ಮನ್ನ ಮನೆಗೆ ಕರ್ಕೊಂಡು ಬರಲು ಸಹಾಯ ಮಾಡಿದವ್ರು ಇವ್ರೇನೆ. ಸಾರ್ ಬನ್ನಿ, ಬನ್ನಿ. ಕೂತ್ಕಳಿ'' ಎಂದು ಬರೀ ಬನಿಯನ್ನಿನಲ್ಲಿದ್ದ ಗಂಡನಿಗೆ ಹಾಕಿಕೊಳ್ಳಲು ಟೀ ಷರ್ಟೊಂದನ್ನು ನೀಡಿದಳು. ನಿನ್ನೆಯ ಘಟನಾವಳಿಗಳನ್ನು ನೆನೆಸಿಕೊಂಡು ನಾಚಿಕೆಯಿಂದ ನೀರಾದ ಮುತ್ತಣ್ಣ ಆ ಟೀ ಷರ್ಟನ್ನು ಹಾಕಿಕೊಳ್ಳಲು ಯತ್ನಿಸಿ ಕುತ್ತಿಗೆ ಹಾಕಿಕೊಳ್ಳುವ ಜಾಗದಲ್ಲಿ ಕೈತೂರಿಸಿ, ತಲೆ ತೂರಿಸಲು ಅಗತ್ಯವಿದ್ದಷ್ಟು ದೊಡ್ಡ ತೂತವೇ ಸಿಗದೆ ಕಕ್ಕಾಬಿಕ್ಕಿಯಾಗತೊಡಗಿದ. ಗಂಡನ ನೆರವಿಗೆ ಬಂದ ಲಲಿತ 'ಒಂದ್ ಷರಟು ಹಾಕಳಕ್ಕೆ ಬರಲ್ಲ' ಎಂದು ಸಿಡುಕು ಮಾಡಿ ಹಾಗು ಹೀಗೂ ಮಾಡಿ ಆ ಟೀ ಷರಟಿನೊಳಕ್ಕೆ ಮುತ್ತಣ್ಣನನ್ನು ತುರುಕಿ ಸೆಟ್ ಮಾಡಿದಳು.

ಬಾಗಿಲ ಹೊಸ್ತಿಲಲ್ಲಿ ಚಪ್ಪಲಿ ಕಳಚಿಟ್ಟ ಕೇಪಿ ಮೇಷ್ಟ್ರು ''ಮುತ್ತಣ್ಣಾ, ನಿನ್ ಹೆಂಡ್ತಿ ನನ್ನ ಶಿಷ್ಯೆ ಕಣೋ, ನಿನ್ನೆ ನಿನ್ನನ್ನ ಇಲ್ಲಿಗೆ ಕರಕೊಂಡು ಬಂದಾಗಲೇ ಗೊತ್ತಾದದ್ದು ನೀನು ಈಕೆಯ ಗಂಡ ಅಂತ. ಸಂತಸಪಡಲು ಕುಡಿದು ದುಃಖಿಗಳಾಗುತ್ತೇವೆ, ನಿದ್ದೆ ಮಾಡಲು ಕುಡಿದು ಸುಸ್ತಿನಿಂದೇಳುತ್ತೇವೆ, ಆರೋಗ್ಯಕ್ಕೆಂದು ಕುಡಿದು ರೋಗಿಗಳಾಗುತ್ತೇವೆ. ಬಹಳೊಳ್ಳೆಯ ಕುಟುಂಬದ ಹೆಣ್ಣು, ನಿಮ್ಮಪ್ಪನೂ ನನಗೆ ಗೊತ್ತಿರೋರೇಯ. ಇದ್ಯಾಕಯ್ಯಾ ಹೀಗಾಗಿದೀಯ? ನಿನ್ ಹೆಂಡ್ತಿ, ಮಕ್ಕಳ ಬಗ್ಗೆ ಯೋಚ್ಸಿದೀಯಾ? ಹೊರಗಿನ ಪ್ರಪಂಚದಲ್ಲಿ ನಿನ್ ಹೆಂಡ್ತೀಗೆ ಹಿಂದೆ ಮುಂದೆ ಜನ ಹೇಗೆ ಮೂದಲಿಸಿ ಮಾತಾಡ್ಬಹುದು ಅನ್ನೋ ಕಲ್ಪನೆನಾದ್ರೂ ನಿನಗಿದೆಯಾ? ನಿನ್ನ ಮಕ್ಕಳು ಅವರು ಹೋದಲ್ಲಿ ಬಂದಲ್ಲಿ ಎಷ್ಟು ಕೀಳರಿಮೆಯಿಂದ ನರಳ್ತಾರೆ ಗೊತ್ತಾ? ನಿನ್ನ ಮಗಳು ಈಗ ಕಾಲೇಜಿರಬಹುದು, ಏನ್ ಲಲಿತಾ, ಕಾಲೇಜಾ?'' ಎಂದರು ಕೇಪೀ. ''ಸಾರ್, ಸೆಕೆಂಡಿಯರ್ ಡಿಗ್ರೀ ಸಾರ್, ಹೋದ ವಾರ, ಅಪ್ಪ ಹೀಗೇ ಕುಡೀತಾ ಇದ್ರೆ ನಾನು ಆತ್ಮಹತ್ಯೆ ಮಾಡ್ಕಂತೀನಿ ಅಂತ ದೊಡ್ಡ ರಂಪಾಟನೇ ಮಾಡಿದ್ಳು. ಮಗಳನ್ನ ತಬ್ಕೊಂಡು ಅತ್ತ ಅಪ್ಪ, ಅವಳ ಕಾಲ್ನೂ ಹಿಡ್ಕೊಂಡ್ರು. ಮತ್ತೆ ನಿನ್ನೆ ನೋಡಿದ್ರೆ ಮತ್ತೆ ಅದೇ ಕಥೆ'' ಎಂದು ಅಳಲೇ ಶುರು ಮಾಡಿದಳು. ಸಮಾಧಾನ ಮಾಡ್ಕೋ ಎಂದು ಲಲಿತಳಿಗೆ ಹೇಳಿದ ಕೇಪೀ, ''ಯಾವ ಅಭ್ಯಾಸದಿಂದ ನೀನು ಸಮಾಜದಿಂದ, ಕುಟುಂಬದಿಂದ ವಿಮುಖ ಆಗಿದ್ದೀಯೋ, ಯಾವುದರಿಂದ ಅಪಮಾನಗೊಂಡಿದೀಯೋ, ಗೆಳೆಯರನ್ನು-ಹಿತೈಷಿಗಳನ್ನು ಕಳೆದುಕೊಂಡಿದೀಯೋ ಅದನ್ನು ತಿರಸ್ಕರಿಸು, ಯಾವುದರಿಂದ ಹಿಂಸೆಗೊಳಗಾಗಿದ್ದೀಯೋ, ಅದನ್ನು ನಿಮ್ಮ ಪ್ರಪಂಚದಿಂದಲೇ ದೂರ ಮಾಡು, ಅದೇ ಪ್ರತೀಕಾರ. ಎಷ್ಟು ಜನ ಮಕ್ಳು ನಿನಗೆ ಮುತ್ತಣ್ಣಾ?'' ಎಂದರು. ಮುಖ ತೋರಿಸಲೂ ಹಿಂಜರಿದು ಕಿಟಕಿ ಕಟ್ಟೆಯ ಮೇಲೆ ಇಟ್ಟಿದ್ದ ಝಂಡುಬಾಮ್ ಡಬ್ಬವನ್ನೇ ತದೇಕಚಿತ್ತದಿಂದ ದಿಟ್ಟಿಸುತಿದ್ದ ಮುತ್ತಣ್ಣ ''ಎರಡು, ಒಂದ್ ಹುಡ್ಗಿ, ಒಂದ್ ಹುಡ್ಗ'' ಎಂದ. ''ನಿನ್ನ ಮಗ ಏನ್ಮಾಡ್ತಿದಾನೆ?'' ''ಅವ್ನು ಈ ಸಲ ಸೆಕೆಂಡ್ ಪೀಯೂಸೀ''

''ಮುತ್ತಣ್ಣಾ, ನಿನ್ನೊಂದಿಗೆ ನಿನ್ನ ಗೆಳೆಯರಿದ್ದಾರೆ, ಹಿತೈಷಿಗಳಾಗಿ ನಾವಿದ್ದೇವೆ. ಎಲ್ಲಕ್ಕಿಂತ ಹೆಚ್ಚಾಗಿ ನಿನ್ನ ಕುಟುಂಬದವರಿದ್ದಾರೆ. ಹೊಸ ಮನುಷ್ಯನಾಗ್ಬೇಕಯ್ಯ ನೀನು'' ಎಂದರು.

ಅಷ್ಟರಲ್ಲಿ ಲಲಿತಾ ಒಳ ಹೋಗಿ ಕಾಫಿ ಮಾಡಿಕೊಂಡು ತಂದಳು. ಇಷ್ಟವಿಲ್ಲದಿದ್ದರೂ ಬೇಸರಿಸಿಕೊಂಡಾಳೆಂದು ಅದರಲ್ಲೇ ಅರ್ಧ ಲೋಟ ಮಾತ್ರ ಮತ್ತೊಂದು ಲೋಟಕ್ಕೆ ಬಗ್ಗಿಸಿಕೊಂಡು ಕುಡಿದ ಕೇಪೀ, ''ನೋಡು, ಲಲಿತಾ, ನನಗೆ ತಿಳಿದಷ್ಟನ್ನು ಹೇಳಿದ್ದೇನೆ. ಮುತ್ತಣ್ಣಾ, ನಿನ್ನ ಹೆಂಡ್ತಿ ಮಕ್ಳು ನಿನ್ನ ಕಾರಣದಿಂದ ಅಪಮಾನದಿಂದ ಬದುಕ್ತಾ ಇದ್ದಾರೆ. ನಿನ್ನ ಮಗಳು ನಾಳೆ ಏನಾದ್ರೂ ಮಾಡ್ಕೊಂಡ್ರೆ ಏನಪ್ಪಾ ಗತಿ? ಇದೇ ಕೊನೇ ನೋಡು. ಇನ್ನೆಂದೂ ನೀನು ಮನೆಯಿಂದ ಹೊರಗೆ ಕುಡೀಕೂಡದು. ಕೆಲ ದಿನ ಮನೆಯಲ್ಲೇ ಔಷದಿಯಂತೆ ಬಳಸು, ಕ್ರಮೇಣ ನಿಲ್ಲಿಸ್ತಾ ಹೋಗು. ನನಗೂ ಗೊತ್ತು, ಈ ಅಮಲು ವಸ್ತುಗಳನ್ನ ಒಮ್ಮೆಲೆ ಬಿಡೋದ್ರಿಂದ, ಅಮಲು ಅಭ್ಯಾಸವಿರುವವರ ಮಾನಸಿಕ ಸ್ವಾಸ್ಥ್ಯ ವಿಚಲಿತಗೊಳ್ಳುತ್ತೆ. ಕಟ್ಟು ಬಿಗಿಯಾದಷ್ಟೂ ಕಿತ್ತುಹೋಗೋದು ಬೇಗ. ನೀನು ಅನುಕೂಲಸ್ತರ ಮನೆಯಲ್ಲಿ ಹುಟ್ಟಿರೋದೇ ಈ ಎಲ್ಲಾ ದುರಭ್ಯಾಸಗಳು ಅಂಟಿಕೊಳ್ಳೋಕೆ ಕಾರಣ. ಸಂಪತ್ತಿರೋದೇ ದುಂದು ಮಾಡೋಕೆ ಅಂತ ತಿಳ್ಕೋಬಿಡ್ತೀರಿ ನೀವು ಶ್ರೀಮಂತರ ಮಕ್ಕಳು. ಪ್ರತಿಷ್ಠೆಗಾಗಿ ಮಕ್ಕಳಿಗೆ ಖರ್ಚಿಗೆ ಅನಗತ್ಯವಾಗಿ ಹಣ ಕೊಡೋದು, ಬೈಕೂ ಕಾರು ಕೊಡಿಸೋದು. ಅದೇ ಹಮ್ಮಿನಲಿ ನೀವು ಬೇಡದ ದುರಭ್ಯಾಸ ಬೆಳೆಸಿಕೊಳ್ಳೋದು. ಹೆಂಡ, ಇಸ್ಪೀಟು, ಗಾಂಜಾ, ಮಟಕಾ, ಸಿನಿಮಾ, ಹುಡ್ಗೀರ ಶೋಕಿ ಇನ್ನೂ ಏನೇನೆಲ್ಲ. ನೀನೇನೂ ಹೇಳದಿದ್ದರೂ ನನಗೆ ಎಲ್ಲಾ ತಿಳಿದಿದೆ. ನೀನು ಹತ್ತನೇ ತರಗತಿಯ ಪ್ರಿಪರೇಟರಿ ಪರೀಕ್ಷೆಯಲಿ ದೊಡ್ಡದೊಂದು ಬಕೀಟಿನ ಚಿತ್ರ ಬರೆದು, ಉತ್ತರ ಬೇಕಿದ್ದರೆ ಇದರೊಳಗೆ ಕೈಹಾಕಿ ಸಿಗುತ್ತೆ ಎಂದು ಬರೆದಿದ್ದೂ ನನಗೆ ಗೊತ್ತು. ಮಕ್ಕಳು ಮೆಜಾರಿಟಿಗೆ ಬಂದಿದ್ದಾರೆ, ಇನ್ನಾದ್ರೂ ನಿನ್ನ ಮನೆತನದ ಗೌರವಕ್ಕೆ ತಕ್ಕಂತೆ ಬದುಕಲು ಕಲಿ. ನಾನಿನ್ನು ಬರ್ತೀನಿ'' ಎಂದು ಎದ್ದರು. ಮುತ್ತಣ್ಣ ಅದೇ ಝಂಡುಬಾಮ್ ಡಬ್ಬವನ್ನೇ ನೋಡುತ್ತಾ ಇದ್ದರೂ ಆತನ ಎರಡೂ ಕಣ್ಣುಗಳಲ್ಲಿ ನೀರು ಜಿನುಗುತಿತ್ತು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248